# ಹಾರುಗುದುರೆಯನೇರಿ ಶಿವ



ಕುದುರೆ ಸವಾರಿ ಶಿವರಾಜ್‌ಕುಮಾರ್‌ಗೆ ಹೊಸತೇನಲ್ಲ. 'ಗಂಧದಗುಡಿ ಭಾಗ-2'ರಲ್ಲಿ ಥೇಟ್ ರಾಜಕುಮಾರರಂತೆಯೇ 'ನಾವಾಡುವ ನುಡಿಯೇ ಕನ್ನಡ ನುಡಿ' ಎಂದು ಅಭಿನಯಿಸಿದ್ದವರು ಶಿವಣ್ಣ. ಗಂಡುಗಲಿ ಕುಮಾರರಾಮದಲ್ಲೂ ಕುದುರೆ ಏರಿದ್ದರು. ಈಗ 'ಶಿವ' ಚಿತ್ರಕ್ಕಾಗಿ ಮತ್ತೆ ಕುದುರೆಯೇರಿದ್ದಾರೆ.

ಹೇಳಿಕೇಳಿ 'ಶಿವ' ಕುದುರೆಗಳನ್ನು ಓಡಿಸುವ ಜಾಕಿಯೊಬ್ಬನ ಕಥೆ. ಈ ಮೊದಲು ಶಿವರಾಜ್ ಏರಿದ ಕುದುರೆಗಳೆಲ್ಲ ಸಿನಿಮಾಕ್ಕಾಗಿ ತರಬೇತಾದವು. ಆದರೆ, 'ಶಿವ' ಚಿತ್ರದ ಮಾತೇ ಬೇರೆ. ಬೆಂಗಳೂರಿನ ರೇಸ್ ಕೋರ್ಸ್ ಅಂಗಳದಲ್ಲಿ ನಿಜವಾದ ರೇಸ್ ಕುದುರೆಗಳ ಬೆನ್ನು ಚಪ್ಪರಿಸುವ ಅವಕಾಶ. ಪೊಗದಸ್ತಾದ ರೇಸ್ ಕುದುರೆಗಳನ್ನು ಕಂಡು ಶಿವಣ್ಣನಿಗೆ ಒಂಥರಾ ಥ್ರಿಲ್. ನಿರ್ದೇಶಕ ಓಂಪ್ರಕಾಶ್ ಕೂಡ ಸಿಕ್ಕಾಪಟ್ಟೆ ಹುಮ್ಮಸ್ಸಿನಲ್ಲಿದ್ದರು. ಕೆಜಿಎಫ್‌ನಲ್ಲಿ ಕ್ಲೈಮ್ಯಾಕ್ಸ್ ಚಿತ್ರೀಕರಣಕ್ಕೆ ಮೊದಲಿನ ದೃಶ್ಯವನ್ನು ಅವರು ಕುದುರೆ ಅಡ್ಡೆಯಲ್ಲಿ ಚಿತ್ರೀಕರಿಸಿಕೊಳ್ಳುತ್ತಿದ್ದರು.

ಅಂದ ಹಾಗೆ, 2011ರ ಸಿನಿಮಾ ರೇಸ್ ಶಿವಣ್ಣನಿಗೆ ಹೇಗಿತ್ತು? 'ಜಾಕ್‌ಪಾಟ್ ಅಂತೂ ಇಲ್ಲ' ಎನ್ನುವುದು ಅವರ ಸ್ಪಷ್ಟನೆ. ನೂರನೇ ಚಿತ್ರ ತೆರೆ ಕಂಡ ವರ್ಷ ಇದು ಎನ್ನುವುದು ಖುಷಿಯ ಸಂಗತಿಯಾದರೂ, ಆ ಚಿತ್ರದ ಪ್ರಚಾರ ಸರಿಯಾಗಿ ನಡೆಯಲಿಲ್ಲ ಎಂದವರು ಬೇಸರ ವ್ಯಕ್ತಪಡಿಸಿದರು. ಹಾಂ, ಶಿವರಾಜ್ ನಾಯಕತ್ವದ ಹೊಸಚಿತ್ರ 'ಅಂದರ್ ಬಾಹರ್' 2012ರ ಮೊದಲ ಭಾಗದಲ್ಲಿ ಸೆಟ್ಟೇರುತ್ತಿದೆ.

## ಮಿಂಚಿನ ಮರಿಗೆ ಸಂಕಷ್ಟ..



ಪ್ರತಿಭಾವಂತ ನಟಿಯೊಬ್ಬಳನ್ನು ಹೇಗೆ ಹಾಳು ಮಾಡಬಹುದು ಎನ್ನುವಂತಿದೆ ನಟಿ ಆಯೇಷಾಳ ಇತ್ತೀಚಿನ ಚಿತ್ರಗಳು. 'ಚೆನ್ನಮ್ಮ', 'ಓಬವ್ವ', ಇದೀಗ 'ಬೇಟೆ'. ಆಯೇಶಾ ನಾಯಕಿಯಾಗಿ ನಟಿಸಿರುವ ಚಿತ್ರಗಳಿವು. ಹೆಸರೇ ಹೇಳುವಂತೆ ಇವೆಲ್ಲ 'ಹೊಡಿಬಡಿ' ಮಾದರಿಯ ಸಿನಿಮಾಗಳು. ಇವುಗಳಲ್ಲಿನ ಮೊದಲೆರಡು ಚಿತ್ರಗಳು ತೆರೆ ಕಂಡಷ್ಟೇ ತ್ವರಿತವಾಗಿ ಚಿತ್ರಮಂದಿರಗಳಿಂದ ನಿರ್ಗಮಿಸಿವೆ. 'ಬೇಟೆ'ಯ ಬಗೆಗೆ ಕೂಡ ಪ್ರೇಕ್ಷಕರು ಉತ್ಸುಕರಾಗಿಲ್ಲ. ಆಯೇಶಾ ಪ್ರತಿಭಾವಂತೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಕರಾಟೆಯಲ್ಲಿ ಬ್ಲಾಕ್‌ಬೆಲ್ಟ್ ಪಡೆದ ಈಕೆ ಮಿಂಚಿನ ಮರಿಯಂತೆ ಕಾಣಿಸುತ್ತಾಳೆ. ಭಾವಾಭಿನಯದಲ್ಲೂ ಸೌಂದರ್ಯದಲ್ಲೂ ಕಡಿಮೆಯೇನಿಲ್ಲ. ಒಳ್ಳೆಯ ಕಥೆ-ನಿರ್ದೇಶಕರು ಸಿಕ್ಕರೆ ಆಯೇಷಾಳಿಂದ ಒಳ್ಳೆಯ ಸಿನಿಮಾ ನಿರೀಕ್ಷಿಸಬಹುದು. ಆದರೆ ಈವರೆಗೆ ಆಕೆಯ ಸಿನಿಮಾ ಮಾಡಿರುವ ನಿರ್ಮಾಪಕ-ನಿರ್ದೇಶಕರಿಗೆ ಸಂತೆಗೆ ಮೂರು ಮೊಳ ನೇಯುವುದೇ ಮುಖ್ಯವಾದಂತಿದೆ. ಹಾಗಾಗಿ ಸಿನಿಮಾಗಳು ಸೋಲುತ್ತಿವೆ, ಪ್ರತಿಭೆ ನಷ್ಟವಾಗುತ್ತಿದೆ. ಅವಕಾಶಗಳನ್ನು ಆರಿಸಿಕೊಳ್ಳುವುದನ್ನು ಕಲಿತುಕೊಳ್ಳದೆ ಹೋದರೆ ಆಯೇಷಾ ಕಳೆದುಹೋಗುವ ಅಪಾಯವೂ ಇದೆ.

## ದರ್ಶನ್ ದೆಸೆ!



'ಸಾರಥಿ' ಚಿತ್ರ ಶತದಿನೋತ್ಸವದ ಹೊಸ್ತಿಲಲ್ಲಿದೆ. ಅಲ್ಲಿಗೆ, ಗಲ್ಲಾಪೆಟ್ಟಿಗೆಯಲ್ಲೂ ಯಶಸ್ವಿಯಾದ 'ಸಾರಥಿ' 2011ರ ಅತಿ ಯಶಸ್ವಿ ಚಿತ್ರ ಎನ್ನುವುದು ಸ್ಪಷ್ಟವಾಗಿದೆ. 'ಸಾರಥಿ'ಯ ಶತದಿನದ ಬೆನ್ನಿಗೇ 'ಚಿಂಗಾರಿ'ಯನ್ನು ತೆರೆ ಕಾಣಿಸುವ ಪ್ರಯತ್ನಗಳು ನಡೆಯುತ್ತಿವೆ. ಹರ್ಷ ನಿರ್ದೇಶನದ 'ಚಿಂಗಾರಿ' ಬಗ್ಗೆಯೂ ಉದ್ಯಮಕ್ಕೆ ನಿರೀಕ್ಷೆಗಳಿವೆ. ಹರ್ಷ ಅವರ ಈ ಮೊದಲಿನ ಚಿತ್ರಗಳಾದ 'ಗೆಳೆಯ' ಹಾಗೂ 'ಬಿರುಗಾಳಿ' ಚಿತ್ರಗಳು ಮೇಕಿಂಗ್ ದೃಷ್ಟಿಯಿಂದ ಗಮನ ಸೆಳೆದಿದ್ದರೂ, ಅವು ಪ್ರೇಕ್ಷಕರ ಗಮನ ಸೆಳೆಯುವಲ್ಲಿ ವಿಫಲವಾಗಿದ್ದವು. ಹಾಗಾಗಿ, 'ಚಿಂಗಾರಿ' ಚಿತ್ರ ಹರ್ಷ ಅವರಿಗೂ ನಿರ್ದೇಶಕರಾಗಿ ನೆಲೆ ಕಂಡುಕೊಳ್ಳುವ ನಿಟ್ಟಿನಲ್ಲಿ ಮಹತ್ವದ ಚಿತ್ರವೆನಿಸಿದೆ.

ಈ ನಡುವೆ ತೆಲುಗಿನ ಸೂಪರ್‌ಹಿಟ್ ಚಿತ್ರ 'ಬೃಂದಾವನಂ' ಅನ್ನು ದರ್ಶನ್ ನಾಯಕತ್ವದಲ್ಲಿ ಕನ್ನಡಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ. ಜೂನಿಯರ್ ಎನ್‌ಟಿಆರ್ ನಟಿಸಿದ್ದ 'ಬೃಂದಾವನಂ' ದರ್ಶನ್ ಇಮೇಜ್‌ಗೆ ಹೇಳಿ ಮಾಡಿಸಿದ ಚಿತ್ರ. ಸದ್ಯಕ್ಕೆ ದರ್ಶನ್‌ರ ಸಿನಿಮಾ ದೆಸೆ ಗಮನಿಸಿದರೆ, 2012ರಲ್ಲೂ ಅವರ ವಿಜಯಪಥ ಮುಂದುವರೆಯುವ ಸೂಚನೆಗಳಿವೆ.

■ ರಘು